# ಕರ್ನಾಟಕ ಸರ್ಕಾರದ ನಡವಳಿಗಳು.

ವಿಷಯ:- ಚಿಕ್ಕಮಗಳೂರು ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಕಡೂರು ಮತ್ತು ಚಿಕ್ಕಮಗಳೂರು ತಾಲ್ಲೂಕು ಚಾಯತಿಗಳಲ್ಲಿ ಟೂಲ್ ಕಿಟ್ ಖರೀದಿಯಲ್ಲಿನ ಅವ್ಯವಹಾರದಲ್ಲಿ ಭಾಗಿಯಾಗಿರುವ ಅಧಿಕಾರಿ/ನೌಕರರ ವಿರುದ್ಧದ ಜಂಟಿ ಇಲಾಖಾ ವಿಚಾರಣೆ – ಅಂತಿಮ ಆದೇಶ.

ಓದಲಾಗಿದೆ: 1. ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ/161/ವಿಸೇಬಿ/2001 ದಿ:23-01-2002. ಹಾಗೂ ಗ್ರಾಅಪ/01/ವಿಸೇಬಿ/2003 ದಿ:03-01-2003.

2. ಆಪಾದಿತರು ಸಲ್ಲಿಸಿರುವ ಲಿಖಿತ ರಕ್ಷಣಾ ಹೇಳಿಕೆಗಳು ದಿನಾಂಕ: 23-01-2003, 31-01-2003, 28-03-2003 ಮತ್ತು 25-02-2002

3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/01/ವಿಸೇಬಿ/2003 ದಿ:07-09-2006.

4. ವಿಚಾರಣಾ ವರದಿ ದಿನಾಂಕ: 29-12-2008.

5. ಸರ್ಕಾರದ ಪತ್ರ ದಿನಾಂಕ:25-03-2013.

6. ಮುಖ್ಯ ಕಾರ್ಯನಿರ್ವಹಕಾಧಿಕಾರಿ, ಜಿಲ್ಲಾ ಪಂಚಾಯತಿ,ಚಿಕ್ಕಮಗಳೂರು ಇವರ ಪತ್ರ ಸಂಖ್ಯೆ: ಜಿಪಂಚಿ/ಆ1 /ಸಿಸಿವಿ/ಉಕಾ(ಆ)/2009-10:ದಿನಾಂಕ:29-05-2013.

-------

**ಪ್ರಸ್ತಾವನೆ:**

ಚಿಕ್ಕಮಗಳೂರು ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಕಡೂರು ಮತ್ತು ಚಿಕ್ಕಮಗಳೂರು ತಾಲ್ಲೂಕು ಪಂಚಾಯತಿಗಳಲ್ಲಿ ಟೂಲ್ ಕಿಟ್ ಖರೀದಿಯಲ್ಲಿ ನಡೆದಿರುವ ಅವ್ಯವಹಾರದಲ್ಲಿ ಭಾಗಿಯಾಗಿರುವ ಈ ಕೆಳಕಂಡ ಅಧಿಕಾರಿಗಳಾದ:-

1) ಶ್ರೀ ಹೆಚ್. ಚಂದ್ರಶೇಖರ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಪಂ., ಚಿಕ್ಕಮಗಳೂರು.(ನಿವೃತ್ತಿ)

2) ಶ್ರೀ ಕೆ. ಎಸ್. ಪ್ರಭಾಕರ ಗುಪ್ತ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಪಂ., ಚಿಕ್ಕಮಗಳೂರು.(ನಿವೃತ್ತಿ)

3) ಶ್ರೀ ಟಿ. ಮಲ್ಲಪ್ಪ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಪಂ., ಕಡೂರು. ಹಾಲಿ ಭೂಸ್ವಾಧೀನಾಧಿಕಾರಿ, ದಾವಣಗೆರೆ.

4) ಶ್ರೀ ಸಿದ್ಧಲಿಂಗಮೂರ್ತಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಪಂ., ಕಡೂರು. ಪ್ರಸ್ತುತ ಕಾರ್ಯನಿರ್ವಾಹಕ ಅಧಿಕಾರಿ ತಾಪಂ., ಕೆ.ಆರ್. ನಗರ.

ಇವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ.) ನಿಯಮಗಳು 1957ರ ನಿಯಮ 11 ರಡಿಯಲ್ಲಿ ಶಿಸ್ತು ಕ್ರಮ ಜರುಗಿಸಿ, ಸದರಿ ನಿಯಮಾವಳಿಗಳು ನಿಯಮ 13 ರಡಿ ಜಂಟಿ ಇಲಾಖಾ ವಿಚಾರಣೆ ನಡೆಸಲು ಶ್ರೀ ಬಿ. ಎಲ್. ಶ್ರೀಕಂಠಯ್ಯ ನಿವೃತ್ತ ನ್ಯಾಯಾಧೀಶರು ಇವರನ್ನು ಮೇಲೆ ಓದಲಾದ ಕ್ರಮ ಸಂಖ್ಯೆ(3) ರಲ್ಲಿ ವಿಚಾರಣಾಧಿಕಾರಿಯಾಗಿ ನೇಮಿಸಲಾಗಿತ್ತು.

ವಿಚಾರಣಾಧಿಕಾರಿಯವರು ಈ ಪ್ರಕರಣದ ವಿಚಾರಣೆ ಕೈಗೊಂಡು ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ವಿಚಾರಣಾ ವರದಿಯನ್ನು ಸಲ್ಲಿಸುತ್ತಾ, ದಾಸ್ತಾವೇಜುಗಳು/ಸಾಕ್ಷಿಗಳನ್ನು ಹಾಜರುಪಡಿಸಿಲ್ಲವಾದ್ದರಿಂದ ಆರೋಪಿತರ ವಿರುದ್ಧದ ಆರೋಪಗಳು ಸಾಕ್ಷ್ಯಾಧಾರ ಕೊರತೆಯಿಂದ ರುಜುವಾತು ಆಗಿಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆ. ಸರ್ಕಾರವು ವಿಚಾರಣಾ ವರದಿಯನ್ನು ಒಪ್ಪದೆ

ಕರ್ನಾಟಕ ಡಿಪಾರ್ಟಮೆಂಟಲ್ ಎನ್‌ಕ್ವಾಯಿರಿಸ್, ಎನ್‌ಫೋರ್ಸ್‌ಮೆಂಟ್ ಆಫ್ ಅಟೆಂಡೆನ್ಸ್ ಆಫ್ ವಿಟ್‌ನೆಸ್ & ಪ್ರೋಡೆಕ್ಷನ್ ಆಫ್ ಡಾಕ್ಯುಮೆಂಟ್ ಮಿಸಲೆನಿಯಸ್ ಪ್ರಾವಿಜನ್ಸ್ ಕಾಯ್ದೆ, 1981 ಕಲಂ 5 ರಡಿಯಲ್ಲಿ ಇಲಾಖಾ ವಿಚಾರಣೆಯನ್ನು ಮುಂದುವರೆಸಿ ಸಾಕ್ಷಿ /ದಾಖಲೆಗಳನ್ನು ಪಡೆದು ಪರಿಶೀಲಿಸಿ ವರದಿ ನೀಡುವಂತೆ ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಯವರಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಸೂಚಿಸಿತ್ತು. ಆದರೆ, ಮಂಡನಾಧಿಕಾರಿಯವರು ಈ ಬಗ್ಗೆ ಕೈಗೊಂಡ ಕ್ರಮದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸದ ಕಾರಣ ಹಾಗೂ ಆ ವೇಳೆಗಾಗಲೇ ವಿಚಾರಣಾಧಿಕಾರಿಯವರು ಮರಣ ಹೊಂದಿದ್ದರಿಂದ ಈ ಕುರಿತು ಪರಿಶೀಲಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಚಿಕ್ಕಮಗಳೂರು ಇವರನ್ನು ಕೋರಲಾಗಿತ್ತು. ಇದಕ್ಕೆ ಪ್ರತಿಯಾಗಿ ಅವರು ವಿಚಾರಣೆ ನಡೆದ ದಿನಾಂಕ:09-09-2008 ರ ಆರ್ಡರ್ ಶೀಟ್‌ನಲ್ಲಿ ವಿಚಾರಣಾಧಿಕಾರಿಯವರು ತಮ್ಮ ಪತ್ರದಲ್ಲಿ ಮಂಡನಾಧಿಕಾರಿಯವರು ದಾಖಲೆಗಳ ಕಡತವನ್ನು ಹಾಜರು ಪಡಿಸಿದ್ದ ಸಂಬಂಧಪಟ್ಟ ಪ್ರತಿಗಳನ್ನು ರಕ್ಷಣಾ ಸಹಾಯಕರಿಗೆ ವಹಿಸಲಾಗಿತ್ತು ಎಂದು ನಮೂದಿಸಿದ ಪ್ರತಿಯನ್ನು ಲಗತ್ತಿಸಿ ಮಂಡನಾಧಿಕಾರಿಯವರು ದಾಖಲೆಗಳನ್ನು ಹಾಜರುಪಡಿಸಿರುವುದು ದೃಢಪಡುತ್ತದೆ ಎಂದು ತಿಳಿಸಿರುತ್ತಾರೆ. ಆದರೆ, ಮಂಡನಾಧಿಕಾರಿಯವರು ಯಾವ ಯಾವ ದಾಖಲೆಗಳನ್ನು /ದಸ್ತಾವೇಜುಗಳನ್ನು ಪರಿಶೀಲಿಸಿದರೆಂಬುದು ದಾಖಲಾಗಿರುವುದಿಲ್ಲ. ಇದರಿಂದ ವಿಚಾರಣಾಧಿಕಾರಿಯವರ ವರದಿಯು ಪ್ರಶ್ನಾರ್ಥಕವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಈ ಮಧ್ಯ ವಿಚಾರಣಾಧಿಕಾರಿಯವರು ನಿಧನ ಹೊಂದಿದ್ದರಿಂದ ಮತ್ತು ಅವರು ಅಂತಿಮ ಇಲಾಖಾ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರಿಂದ ದಾಖಲೆಗಳ ಅಲಭ್ಯತೆಯ ಕಾರಣ ಈ ಪ್ರಕರಣವನ್ನು ಮತ್ತೆ ಮುಂದುವರೆಸಲು ಸಾಧ್ಯವಿಲ್ಲವೆಂದು ಸರ್ಕಾರವು ಪರಿಗಣಿಸಿ ವಿಚಾರಣಾಧಿಕಾರಿಯವರ ದಿನಾಂಕ 29.12.2008ರ ವಿಚಾರಣಾ ವರದಿಯನ್ನು ಅಂಗೀಕರಿಸಿ, ಮೇಲಿನ ನಾಲ್ಕು ಆರೋಪಿತ ಅಧಿಕಾರಿಗಳನ್ನು ಆರೋಪ ಮುಕ್ತಗೊಳಿಸಲು ತೀರ್ಮಾನಿಸಿರುತ್ತದೆ. ಇದಲ್ಲದೆ ದಾಖಲೆಗಳು ಕಾಣೆಯಾಗಿರುವುದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದ್ದು, ಸದರಿ ದಾಖಲೆಗಳು ಕಾಣೆಯಾಗಲು ಕಾರಣರಾದ ಅಧಿಕಾರಿ / ನೌಕರರ ವಿರುದ್ಧ ಪ್ರತ್ಯೇಕವಾಗಿ ಶಿಸ್ತು ಕ್ರಮ ಜರುಗಿಸಲು ಸರ್ಕಾರವು ನಿರ್ಣಯಿಸಿದೆ. ಅದರಂತೆ, ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 12 ವಿಸೇಬಿ 2009 ಬೆಂಗಳೂರು ದಿನಾಂಕ:07-04-2014</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಚಿಕ್ಕಮಗಳೂರು ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಕಡೂರು ಮತ್ತು ಚಿಕ್ಕಮಗಳೂರು ತಾಲ್ಲೂಕು ಪಂಚಾಯತಿಗಳಲ್ಲಿ ಟೂಲ್ ಕಿಟ್ ಖರೀದಿಯಲ್ಲಿ ನಡೆದಿರುವ ಅವ್ಯವಹಾರದಲ್ಲಿ ಭಾಗಿಯಾಗಿರುವ ಈ ಕೆಳಕಂಡ ಅಧಿಕಾರಿಗಳಾದ:-

1) ಶ್ರೀ ಹೆಚ್, ಚಂದ್ರಶೇಖರ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಪಂ., ಚಿಕ್ಕಮಗಳೂರು.(ನಿವೃತ್ತಿ)
2) ಶ್ರೀ ಕೆ. ಎಸ್. ಪ್ರಭಾಕರ ಗುಪ್ತ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಪಂ., ಚಿಕ್ಕಮಗಳೂರು.(ನಿವೃತ್ತಿ)
3) ಶ್ರೀ ಟಿ. ಮಲ್ಲಪ್ಪ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಪಂ., ಕಡೂರು. ಹಾಲಿ ಭೂಸ್ವಾಧೀನಾಧಿಕಾರಿ, ದಾವಣಗೆರೆ.

4) ಶ್ರೀ ಸಿದ್ದಲಿಂಗಮೂರ್ತಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಪಂ., ಕಡೂರು. ಪ್ರಸ್ತುತ ಕಾರ್ಯನಿರ್ವಾಹಕ ಅಧಿಕಾರಿ ತಾಪಂ., ಕೆ.ಆರ್. ನಗರ ಇವರುಗಳನ್ನು ಅವರುಗಳ ವಿರುದ್ಧದ ಆರೋಪಗಳಿಂದ ಮುಕ್ತಗೊಳಿಸಿ ಈ ಮೂಲಕ ಆದೇಶಿಸಿದೆ.

ಮುಂದುವರೆದು, ದಾಖಲೆಗಳು ಕಾಣೆಯಾಗಲು ಕಾರಣರಾಗಿರುವ ಅಧಿಕಾರಿ / ನೌಕರರ ವಿರುದ್ಧ ಪ್ರತ್ಯೇಕವಾಗಿ ಶಿಸ್ತು ಕ್ರಮ ಜರುಗಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಚಂದ್ರಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಚಿಕ್ಕಮಗಳೂರು.
5. ಸಂಬಂಧಿಸಿದ ಅಧಿಕಾರಿಗಳಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಚಿಕ್ಕಮಗಳೂರು ಇವರ ಮುಖಾಂತರ).
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಕಾರ್ಯದರ್ಶಿ(ಪಂ.ರಾಜ್)/ಅಪರ ಕಾರ್ಯದರ್ಶಿ (ಆಡಳಿತ), ಗ್ರಾ .ಅ. & ಪಂ.ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
7. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.